

**LGBTQ ಇತಿಹಾಸ ಮತ್ತು ಹಕ್ಕುಗಳಿಗೆ ಮೀಸಲಾದ, ‘ಗೇ ಲಿಬರೇಶನ್’ ಹೆಸರಿನ ಅಮೆರಿಕದ ನ್ಯೂಯಾರ್ಕ್‌ನಲ್ಲಿರುವ ರಾಷ್ಟ್ರೀಯ ಸ್ಮಾರಕ.**

ಹಿಂಸೆ ಕೊಟ್ಟಿದೆ. ನಮ್ಮ ತಲೆ ಬೋಳಿಸಿದ್ದೂ ಇದೆ. ಜೈಲಿಗೆ ಕಳಿಸಿದ್ದೂ ಇದೆ. ‘ನಾವೂ ಮನುಷ್ಯರಲ್ವಾ? ನಾವು ಈ ದೇಶದ ಪ್ರಜೆಗಳು ಅಲ್ವಾ?’ ಎನ್ನುವ ನಮ್ಮ ಮೂಲಭೂತ ಪ್ರಶ್ನೆಯನ್ನು ಸುಪ್ರೀಂ ಕೋರ್ಟ್‌ನಲ್ಲಿ ದಾಖಲಿಸಿದೆವು. ಏಪ್ರಿಲ್ 15, 2014ರಲ್ಲಿ ಸುಪ್ರೀಂ ಕೋರ್ಟ್, ಲಿಂಗತ್ವ ಅಲ್ಪ ಸಂಖ್ಯಾತ ಸಮುದಾಯವನ್ನು ಸಮಾನ ಪ್ರಜೆಗಳು ಎಂದು ಪರಿಗಣಿಸುವಂತೆ ಆದೇಶ ನೀಡಿತು’’ ಎನ್ನುವ ಅಕ್ಕಯ್, ಆ ತೀರ್ಪನ್ನು ತಮ್ಮ ಸಮುದಾಯದ ಹೋರಾಟದ ಬೆಳ್ಳಿಕಿರಣ ಎಂದೇ ಭಾವಿಸಿದ್ದಾರೆ.

‘‘ಪ್ರಕೃತಿಯ ವಿರುದ್ಧವಾಗಿದ್ದೀರಿ, ಇದು ಅಪರಾಧ, ಎಂದು ಹಿಂಸೆಯನ್ನು ಹೇರುತ್ತಿದ್ದ ಐಪಿಸಿ 377 ಕಲಂ ಅನ್ನು 2018ರಲ್ಲಿ ಸುಪ್ರೀಂ ಕೋರ್ಟ್‌ನ ಸಾಂವಿಧಾನಿಕ ಪೀಠ ರದ್ದು ಮಾಡಿತು. ಈ ಕಾಯ್ದೆ ಬಳಸಿ ನಮ್ಮ ಸಮುದಾಯದವರನ್ನು ಹಣಿಯಲು ಉಪಯೋಗಿಸುತ್ತಿದ್ದ ಸರ್ಕಾರಕ್ಕೆ ನಮ್ಮ ಬಗ್ಗೆ ಸ್ಪಷ್ಟ ಮಾಹಿತಿ ಆಗಲೂ ಇರಲಿಲ್ಲ, ಈಗಲೂ ಇಲ್ಲ. ನಮ್ಮ ಅಂತರಾತ್ಮದ ಧ್ವನಿಗೆ ಅಂತಃಕರಣದಿಂದ ನ್ಯಾಯದಾನ ಮಾಡಿದ ಸುಪ್ರೀಂ ಕೋರ್ಟ್‌ಗೆ ನಾವು ಆಭಾರಿ. 2019–2020ರಲ್ಲಿ ‘ಟ್ರಾನ್ಸ್‌ಜೆಂಡರ್ ಪ್ರೊಟೆಕ್ಷನ್ ಆಕ್ಟ್’ ಸಂಸತ್‌ನಲ್ಲಿ ಪಾಸಾಗಿದೆ. ಆ ಕಾಯ್ದೆಯನ್ನು ಎಲ್ಲ ರಾಜ್ಯಗಳೂ ಸಮರ್ಪಕವಾಗಿ ಅನುಷ್ಠಾನ ಮಾಡಬೇಕಿದೆ. ಅದರ ಅಡಿಯಲ್ಲಿ ಮೀಸಲಾತಿ ನೀಡಲಾಗಿದೆ. ಆದರೆ, ಕಾರ್ಯಾಂಗ ವ್ಯವಸ್ಥೆ ನಮ್ಮನ್ನು ಅರ್ಥ ಮಾಡಿಕೊಂಡಿಲ್ಲ. ಟ್ರಾನ್ಸ್‌ಜೆಂಡರ್ ಪ್ರಮಾಣಪತ್ರ ಪಡೆಯಬೇಕೆಂದರೆ, ಅದಕ್ಕೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಬಳಿ ಹೋಗಬೇಕು ಎನ್ನುತ್ತಾರೆ. ಯಾಕೆ ಹೋಗಬೇಕು? ನಮ್ಮ ಮೂಲಭೂತ ಮತ್ತು ಸಾಂವಿಧಾನಿಕ ಹಕ್ಕನ್ನು ಪಡೆದುಕೊಳ್ಳಲು ನಾವೇಕೆ ಅಂಗಲಾಚಬೇಕು. ವೈದ್ಯಕೀಯ ಪ್ರಮಾಣ ಪತ್ರದ ಮೇಲೆ ಗಂಡು–ಹೆಣ್ಣು ಲಿಂಗಗಳಿಗೆ ಪತ್ರವನ್ನು ನೀಡುತ್ತಾರೆಯೇ? ಅವರಿಗೆ ಇಲ್ಲದ ನಿಯಮ ನಮಗೇಕೆ? ಈ ನೀತಿಯನ್ನು ನಮ್ಮ ಸಮುದಾಯ ವಿರೋಧ ಮಾಡುತ್ತದೆ. ತೃತೀಯ ಲಿಂಗಿ, ಸೆಕ್ಸ್, ಜೆಂಡರ್ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸದೆ, ಅವರ ಬಗ್ಗೆ ತಿಳಿಯದೇ ನಿರ್ಧಾರ ತೆಗೆದುಕೊಳ್ಳುವುದನ್ನು ಲಿಂಗತ್ವ ಅಲ್ಪಸಂಖ್ಯಾತ ಸಮುದಾಯ ಒಪ್ಪಲು ಸಿದ್ಧವಿಲ್ಲ. ಆ ಸಮುದಾಯಕ್ಕಾಗಿ ಪ್ರತ್ಯೇಕ ಕಲ್ಯಾಣ ಮಂಡಳಿಯನ್ನು ರೂಪಿಸಬೇಕು. ಅದಕ್ಕೆ ಆ ಸಮುದಾಯದವರನ್ನೇ ಮುಖ್ಯಸ್ಥರನ್ನಾಗಿ ಮಾಡಬೇಕು. ಶಾಸನಸಭೆಯಲ್ಲೂ ಅವರಿಗೆ ಪ್ರಾತಿನಿಧ್ಯ ಕೊಟ್ಟರೆ ಮಾತ್ರ ಅವರ ಸಮುದಾಯಕ್ಕೆ ನ್ಯಾಯ ನೀಡಲು ಸಾಧ್ಯ ಆಗಬಹುದು’’ ಎನ್ನುವುದು ಅಕ್ಕಯ್ ಅವರ ಮನದ ಇಂಗಿತ.

‘‘ಮೀಸಲಾತಿ ಕಲ್ಪಿಸಿ ಮೂರು ಜನಕ್ಕೆ ಕೆಲಸ ಕೊಟ್ಟಿದ್ದೇವೆ ಎಂದರೆ ಆಗುವುದಿಲ್ಲ. ಅದರಿಂದ ಅವರ ಬೇಡಿಕೆ ಪರಿಪೂರ್ಣ ಆಯಿತು ಅಂತಲೂ ಅಲ್ಲ. ತಮ್ಮ ಸಮುದಾಯದಲ್ಲಿ ನಾಗರಿಕ ಸೌಲಭ್ಯ ವಂಚಿತ ವೃದ್ಧರೂ, ಎಚ್‌ಐವಿ ಸೋಂಕಿತರೂ ಇದ್ದಾರೆ. ನೌಕರಿ ಒಂದು ನೆರವೇ ಹೊರತು, ಪರಿಹಾರ ಅಲ್ಲ. ಜಸ್ಟಿಸ್ ಅಲ್ತಮಶ್ ಕಬೀರ್ 2012–13ರಲ್ಲೇ ಹೈಕೋರ್ಟ್‌ನಲ್ಲಿ ‘ಅನು’ ಎಂಬುವವರಿಗೆ ‘ಡಿ’ ಗ್ರೂಪ್ ಉದ್ಯೋಗ ನೀಡಿದ್ದರು. ಇದು ಲೈಂಗಿಕ ಅಲ್ಪಸಂಖ್ಯಾತರಿಗೆ ದೇಶದಲ್ಲಿ ದೊರೆತ ಮೊಟ್ಟ ಮೊದಲ ಸರ್ಕಾರಿ ಉದ್ಯೋಗ ಅವಕಾಶ. ನಂತರ ಬೇರೆ ಬೇರೆ ಕಡೆ ಉದ್ಯೋಗ ಅವಕಾಶಗಳು ತೆರೆದುಕೊಂಡಿವೆ. ಈ ಅವಕಾಶಗಳಿಂದ ಸಮುದಾಯದ ಸಮಸ್ಯೆಗಳು ಪರಿಹಾರ ಆಗಲ್ಲ. ನಮ್ಮ ಸಮುದಾಯದವರು ಶಿಕ್ಷಣ ಪಡೆಯುವುದೇ ಬಹುದೊಡ್ಡ ಸಮಸ್ಯೆಯಾಗಿದೆ’’ ಎನ್ನುತ್ತಾರೆ ಅಕ್ಕಯ್. ಸ್ವತಃ ಅಕ್ಕಯ್ 10ನೇ ತರಗತಿಯಲ್ಲಿ, ಗಣಿತದಲ್ಲಿ ಅನುತ್ತೀರ್ಣ ಆಗಿದ್ದಾರೆ. ‘ವಿದ್ಯಾರ್ಹತೆ ಮೇಲೆ ತಾನು ಕಸ ಗುಡಿಸುವ ಕೆಲಸ ಮಾಡಲು ಸಾಧ್ಯವೇ?’ ಎಂದವರು ಪ್ರಶ್ನಿಸುತ್ತಾರೆ.

**ಈಗ ಪರಿಶಿಷ್ಟರ ನಕಲಿ ಜಾತಿ ಪ್ರಮಾಣ ಪತ್ರವನ್ನು ಪಡೆದುಕೊಳ್ಳುತ್ತಿರುವ ನಿದರ್ಶನ ಇದೆ. ಅಂತೆಯೇ ಲಿಂಗತ್ವ ಅಲ್ಪಸಂಖ್ಯಾತ ಮೀಸಲು ಕೂಡ ಲಾಭಕ್ಕಾಗಿ ನಕಲಿ ವ್ಯಕ್ತಿಗಳ ಪಾಲಾಗಬಹುದು. ಈ ಲೋಪವನ್ನು ತಡೆಯಲು ವ್ಯವಸ್ಥೆ, ಸಮುದಾಯವನ್ನು ಒಳಗೊಂಡು ಸೂಕ್ತ ನೀತಿ ರೂಪಿಸಬೇಕು.**

‘ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳು ಸ್ನಾತಕೋತ್ತರ ಅಧ್ಯಯನಕ್ಕೆ ಶೇ. 1 ಮೀಸಲು ನೀಡಿವೆ. ರಾಜ್ಯದ ಯಾವುದಾದರೂ ಒಂದೇ ಒಂದು ವಿವಿಯಲ್ಲಿ ಆ ಅವಕಾಶವನ್ನು ಪೂರ್ಣವಾಗಿ ಬಳಸಿದ ನಿದರ್ಶನ ಇಲ್ಲ. ಏಕೆ ಶಿಕ್ಷಣ ಸಿಗುತ್ತಿಲ್ಲ. ಅವರಿಗೆ ಏನಾಗಬೇಕು ಎಂದು ಮಹಿಳಾ ಮತ್ತು ಮಕ್ಕಳ ಇಲಾಖೆ ಯೋಚನೆಯನ್ನೇ ಈತನಕ ಮಾಡಲಿಲ್ಲ. ಈಗ ಉದ್ಯೋಗದಲ್ಲಿ ಕಲ್ಪಿಸಿರುವ ಮೀಸಲಾತಿ ದುರುಪಯೋಗ ಆಗುವ ಅಪಾಯವೂ ಇದ್ದೇ ಇದೆ. ಈಗ ಪರಿಶಿಷ್ಟರ ನಕಲಿ ಜಾತಿ ಪ್ರಮಾಣ ಪತ್ರವನ್ನು ಪಡೆದುಕೊಳ್ಳುತ್ತಿರುವ ನಿದರ್ಶನ ಇದೆ. ಅಂತೆಯೇ ಲಿಂಗತ್ವ ಅಲ್ಪಸಂಖ್ಯಾತ ಮೀಸಲು ಕೂಡ ಲಾಭಕ್ಕಾಗಿ ನಕಲಿ ವ್ಯಕ್ತಿಗಳ ಪಾಲಾಗಬಹುದು’ ಎನ್ನುವ ಆತಂಕ ಅವರದು. ಈ ಲೋಪವನ್ನು ತಡೆಯಲು ವ್ಯವಸ್ಥೆ, ಸಮುದಾಯವನ್ನು ಒಳಗೊಂಡು ಸೂಕ್ತ ನೀತಿ ರೂಪಿಸಬೇಕು ಎನ್ನುವ ಕಳಕಳಿ ಅಕ್ಕಯ್ ಅವರದು.